INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-8, Issue -04,July-August, 2026
Page No,136-145
Peer -Reviewed, Refereed Journal

# ‘ಕ್ಷೇತ್ರಪತಿ’ ಚಲನಚಿತ್ರದಲ್ಲಿ ರೈತ ಸಂವೇದನೆ

**ಅಭಿಷೇಕ್.**[1]
**ಪ್ರೊ.ಎನ್.ಕೆ.ಲೋಲಾಕ್ಷಿ.**[2]

ಸಮೂಹ ಮಾಧ್ಯಮಗಳು ಜಗತ್ತನ್ನು ಆವರಿಸಿಕೊಂಡಿವೆ. ಅದರಲ್ಲಿ ಮುಖ್ಯವಾಗಿ ಚಲನಚಿತ್ರ ಮಾಧ್ಯಮವು ಜಗತ್ತಿನ ಎಲ್ಲೆಡೆ ಅಸಂಖ್ಯಾತ ಜನವರ್ಗಗಳನ್ನು ತಲುಪುವಂತಹ ಪರಿಣಾಮಕಾರಿ ಮಾಧ್ಯಮವಾಗಿ ಬೆಳೆದಿದೆ. ಆಧುನಿಕ ಜಗತ್ತಿನ ವಿಸ್ಮಯಕಾರಿ ವೈಜ್ಞಾನಿಕ ಮತ್ತು ತಾಂತ್ರಿಕ ಬೆಳವಣಿಗೆಗಳಿಂದಾಗಿ ಚಲನಚಿತ್ರ ಮಾಧ್ಯಮವು ಹೊಸ ಆಯಾಮಗಳನ್ನು ಪಡೆದುಕೊಳ್ಳುತ್ತಿದೆ. ಬದುಕಿನ ವಿವಿಧ ಮುಖಗಳನ್ನು ಯಥಾವತ್ತಾಗಿ ಪ್ರತಿಬಿಂಬಿಸುವ ಅನೇಕ ಮೂಲಭೂತ ಲಕ್ಷಣಗಳನ್ನು ಚಲನಚಿತ್ರ ಮಾಧ್ಯಮ ಹೊಂದಿದೆ. ಎಲ್ಲಾ ವರ್ಗದ ಜನರನ್ನು ತಲುಪುವ ಸರ್ವವ್ಯಾಪಿ ಮಾಧ್ಯಮವಾಗಿದೆ. ಕನ್ನಡ ಚಲನಚಿತ್ರಗಳ ಆರಂಭದ ಕಾಲದಲ್ಲಿ ಪೌರಾಣಿಕ, ಭಕ್ತಿ ಪ್ರಧಾನ, ಜಾನಪದ, ಐತಿಹಾಸಿಕ ಚಲನಚಿತ್ರಗಳು ಹೆಚ್ಚು ಬಿಡುಗಡೆಯಾಗುತ್ತಿದ್ದವು. ಎಪ್ಪತ್ತರ ದಶಕದ ಆರಂಭದಲ್ಲಿ ಸಾಮಾಜಿಕ ಚಲನಚಿತ್ರಗಳ ನಿರ್ಮಾಣ ಆರಂಭವಾಯಿತು. ನಂತರ ಅಂದಿನಿಂದ ಇಂದಿನವರೆಗೆ ಸಾಮಾಜಿಕ ಚಿತ್ರಗಳು ಹೆಚ್ಚಾಗಿ ಮೂಡಿಬರುತ್ತಿವೆ.

ಕೃಷಿ ಸಂಸ್ಕೃತಿಯು ಕನ್ನಡದ ಹಲವು ಚಲನಚಿತ್ರಗಳಲ್ಲಿ ಮೂಡಿಬಂದಿದೆ. ಚಲನಚಿತ್ರಗಳ ಆರಂಭದ ಕಾಲದಲ್ಲಿ ಹೆಚ್ಚಾಗಿ ಕಂಡುಬಂದಿದೆ. ನಗರಗಳ ಬೆಳವಣಿಗೆ ಆಗದಿದ್ದುದು ಮತ್ತು ಚಿತ್ರನಗರಿ(ಫಿಲ್ಮ್‌ಸಿಟಿ)ಗಳು ಇಲ್ಲದ ಕಾರಣದಿಂದ ಅಂದು ನಿರ್ದೇಶಕರುಗಳು ತಮ್ಮ ಸ್ಥಳೀಯ ಪ್ರದೇಶಗಳಲ್ಲೇ ಚಿತ್ರೀಕರಣ ಮಾಡುತ್ತಿದ್ದರು. ಕಾಲಾನಂತರದಲ್ಲಿ ಚಿತ್ರನಗರಿಗಳು ನಿರ್ಮಾಣವಾಗಿ ಕೃಷಿ ಸಂಸ್ಕೃತಿಯ ಚಿತ್ರಣ ಕಡಿಮೆಯಾಗುತ್ತಾ ಬಂತು. ಆದರೆ ರೈತರ ಸಮಸ್ಯೆಯೊಂದನ್ನು ಆಧರಿಸಿ ಬಂದ ಮೊದಲ ಚಲನಚಿತ್ರ ಭೂದಾನ(1962). ಅಲ್ಲಿಂದ ಇಂದಿನ ಕಾಟೇರ(2023) ಚಲನಚಿತ್ರದವರೆಗೆ ರೈತರ ಸಮಸ್ಯೆಗಳನ್ನು ಕುರಿತ ಹಲವು ಚಲನಚಿತ್ರಗಳು ಬಿಡುಗಡೆಯಾಗಿವೆ. ಅಂತಹ ರೈತ ಪ್ರಧಾನ ವಸ್ತುವುಳ್ಳ ಕ್ಷೇತ್ರಪತಿ(2023) ಚಲನಚಿತ್ರವನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

---

**1. ಸಂಶೋಧನಾ ವಿದ್ಯಾರ್ಥಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು.**
**2.ಪ್ರಾಧ್ಯಾಪಕರು ಮತ್ತು ಮಾರ್ಗದರ್ಶಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು.**

‘ಶ್ರೀಕಾಂತ್ ಕಟಗಿ’ ನಿರ್ದೇಶನದ ‘ಕ್ಷೇತ್ರಪತಿ’ ಚಲನಚಿತ್ರವು ರೈತರ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ವಿದ್ಯಾವಂತ ಯುವಕನ ಕಥೆಯಾಗಿದೆ. ಬಸವರಾಜ್ ಎಂಜಿನಿಯರಿಂಗ್ ವಿದ್ಯಾರ್ಥಿ, ಅಮೆರಿಕದಲ್ಲಿ ಬದುಕು ಕಟ್ಟಿಕೊಳ್ಳುವ ಮಹದಾಸೆ ಹೊಂದಿರುವ ಜಾಣ ತರುಣ. ತಂದೆಯ ಸಾವಿನಿಂದಾಗಿ ಬಸವ ಹಳ್ಳಿಗೆ ಬರುತ್ತಾನೆ. ಈರುಳ್ಳಿಯ ಬೆಂಬಲ ಬೆಲೆ ಕುಸಿತದಿಂದ ಕಂಗೆಟ್ಟು, ಬ್ಯಾಂಕ್ ಸಾಲದ ಶೂಲಕ್ಕೆ ಅಂಜಿ ನಿನ್ನ ತಂದೆ ಉರುಳು(ನೇಣು) ಹಾಕಿಕೊಂಡರೆಂದು ಜನರು ತಿಳಿಸುತ್ತಾರೆ. ಇದೇ ಪರಿಸ್ಥಿತಿ ಮುಂದುವರಿದರೆ ಮುಂದಿನ ವರ್ಷ ನಾವೆಲ್ಲ ಆತ್ಮಹತ್ಯೆ ಮಾಡಿಕೊಳ್ಳಬೇಕಾಗುತ್ತದೆ ಎಂದು ತಿಳಿಸುತ್ತಾರೆ.

ಸಾಹುಕಾರ್ ವೀರಭದ್ರ ಜಹಗೀರ್‌ದಾರ್ ಶಾಸಕ ಮತ್ತು ಪಕ್ಷವೊಂದರ ಜಿಲ್ಲಾಧ್ಯಕ್ಷ. ಮುಂದೆ ರಾಜ್ಯಾಧಕ್ಷ, ಮುಖ್ಯಮಂತ್ರಿಯಾಗಲು ಪ್ರಯತ್ನಿಸುತ್ತಿರುವವ. ವಿದೇಶದ ಸೂಪರ್ ಮಾರ್ಕೆಟ್ ಕಂಪನಿಯವರು ಈತನನ್ನು ಭೇಟಿ ಮಾಡಿ ೨೫೦೦ ಎಕರೆ ಜಮೀನನ್ನು ಅಗ್ರಿಮೆಂಟ್ ಮಾಡಿಸಿಕೊಡುವಂತೆ ಬೇಡಿಕೆ ಇಟ್ಟಾಗ ೧೫% ಕಮಿಷನ್ ಮಾತುಕತೆಯೊಂದಿಗೆ ಒಪ್ಪುತ್ತಾನೆ. ಎ.ಪಿ.ಎಂ.ಸಿ ಅಧ್ಯಕ್ಷ ಪಾಟೀಲನು ಶಾಸಕ ವೀರಭದ್ರನಿಗೆ ಜೋಳ, ಗೋಧಿ, ಕಡ್ಲೆ, ಇತರೆ ಕಾಳುಕಡ್ಡಿ ಸೇರಿ ಒಟ್ಟು ೨೧ ಸಾವಿರ ಟನ್ ಮಾಲು ಬರುವ ನಿರೀಕ್ಷೆ ಇದೆ ಎಂದು ಹೇಳುತ್ತಾನೆ. “ಪೂರ್ತಿ ಮಾಲ್ ಬರೋ ತನಕ ಜಾಸ್ತಿ ರೇಟ್ ಇಡ್ಸು ಮಾಲ್ ಪೂರ್ತಿ ಬಂದ ಮೇಲೆ ೩೦% ಕಡ್ಮೆ ಮಾಡ್ಸು”[೧] ಎಂದು ಶಾಸಕ ಹೇಳುತ್ತಾನೆ. ರಾಜಕಾರಣಿಗಳು ಎ.ಪಿ.ಎಂ.ಸಿ.ಯನ್ನು ನಿಯಂತ್ರಣಕ್ಕೆ ತೆಗೆದುಕೊಂಡು ರೈತರಿಗೆ ಮೋಸ ಮಾಡಿ ತಾವೂ ಲಾಭ ಮಾಡಿಕೊಂಡು ದಲ್ಲಾಳಿಗಳಿಗೂ ಹೇಗೆ ಲಾಭಮಾಡಿಕೊಡುತ್ತಾರೆಂದು ಇಲ್ಲಿ ತಿಳಿಯಬಹುದು.

ನಾಯಕ ಬಸವನ ಮನೆಗೆ ಕೃಷಿ ಸಚಿವ ಮತ್ತು ಶಾಸಕ ಬಂದು ೨ ಲಕ್ಷ ಪರಿಹಾರ ಕೊಡುತ್ತಾರೆ. ಸಚಿವನು ರೈತರ ಸಮಸ್ಯೆಗಳ ಕುರಿತು ಆಯೋಗ ರಚಿಸಿದ್ದು ವರದಿ ಬಂದ ನಂತರ ಪರಿಹಾರ ಕ್ರಮ ಕೈಗೊಳ್ಳುವುದಾಗಿ ಮಾಧ್ಯಮಗಳಿಗೆ ತಿಳಿಸುತ್ತಾನೆ. ಇದು ಜಾರಿಕೊಳ್ಳುವ ಮಾತಿನಂತೆ ಕಾಣುತ್ತದೆ. ಪ್ರಸ್ತುತ ನಮ್ಮ ರಾಜಕಾರಣಿಗಳು ಮಾಧ್ಯಮಗಳಲ್ಲಿ ಹೀಗೆಯೇ ಅಡ್ಡಗೋಡೆ ಮೇಲೆ ದೀಪ ಇಟ್ಟಂತೆ ಮಾತನಾಡುವುದನ್ನು ಕಾಣುತ್ತೇವೆ. ಆಯೋಗ, ಸಮಿತಿ ಎಂಬ ಹೆಸರುಗಳನ್ನು ಬಳಸಿ ಜನಾಕ್ರೋಶವನ್ನು ತಾತ್ಕಾಲಿಕವಾಗಿ ಮುಂದೂಡುವುದರಲ್ಲಿ ರಾಜಕಾರಣಿಗಳು ನಿಸ್ಸೀಮರು.

ಬಸವನನ್ನು ಸ್ನೇಹಿತ ನಿಂಗರಾಜು ಹೆಣ್ಣು ನೋಡಲು ಹೋಗುವಾಗ ಕರೆದೊಯ್ಯುತ್ತಾನೆ. ಅಲ್ಲಿ ನಿಂಗರಾಜು ಮತ್ತು ಹುಡುಗಿ ಮಾತನಾಡಲು ಕೋಣೆಯೊಳಗೆ ಹೋಗುತ್ತಾರೆ. ಆಗ ಹುಡುಗಿಯ ತಂದೆಯು ಬಸವನಿಗೆ “ಹುಡುಗ ಏನೋ ಪಸಂದಾಗವ್ನೆ ಆದ್ರೆ ನಂ ಹುಡ್ಗಿನ ಒಕ್ಕಲ್ತನ ಮಾಡೋನ್ಗೆ ಕೊಡಲ್ಲ, ನಿಂ ಗೆಳೆಯನಿಗೆ ಹೇಳು ಯಾವ್ದೊ ಒಂದ್ ಗೌರ್ಮೆಂಟ್ ನೌಕರಿ ಮಾಡಿಕೊಳ್ಳಲು, ನಮಗೆ ಬೇರೆ ಬೇರೆ ಕಡೆಯಿಂದ ಚಲೋ ಆಫರ್‌ಗಳು ಬರ್ತಿವೆ”[೨] ಎಂದು ಹೇಳುತ್ತಾರೆ. ನಮ್ಮ ಸಮಾಜದಲ್ಲಿ ಹೆಣ್ಣು

ನೋಡಲು ಹೋಗುವ ರೈತ ಯುವಕರ ಪರಿಸ್ಥಿತಿಯೂ ಇದೇ ಆಗಿದೆ. ಇದಕ್ಕೆ ಬೇಸಾಯದ ಕಷ್ಟ ಕೆಲಸಗಳು ಮತ್ತು ಬೆಂಬಲ ಬೆಲೆಯ ಸಿಗದಿರುವಿಕೆ ಪ್ರಮುಖ ಕಾರಣ. ಮದುವೆ ಮಾಡಿಕೊಟ್ಟ ಹುಡುಗಿ ಬಿಸಿಲಿನಲ್ಲಿ ಪರಿಶ್ರಮ ಕೆಲಸ ಮಾಡದಿರಲಿ ಎಂಬುದರ ಜೊತೆಗೆ ಬೆಳೆಗಳಿಗೆ ಬೆಲೆ ಕುಸಿದು ರೈತ ಬಡವನಾಗಿಯೇ ಇರುವುದೂ ಒಂದು ಕಾರಣ. ಬಸವನು ಹೀಗೆ ಒಂದೊಂದಾಗಿ ರೈತರ ಕಷ್ಟಗಳನ್ನು ತಿಳಿಯುತ್ತಾನೆ.

ಸೂಪರ್ ಮಾರ್ಕೆಟ್‌ನವರಿಗೆ ಕೊಟ್ಟ ಮಾತು ಉಳಿಸಲು ಶಾಸಕ ವೀರಭದ್ರನು ರೈತರಿಗೆ ಸಾಲ ನೀಡಿರುವ ಬ್ಯಾಂಕ್‌ನವರಿಗೆ ಒತ್ತಡ ಹೇರಿ ನೋಟೀಸ್ ಕಳುಹಿಸುವಂತೆ ಮಾಡುತ್ತಾನೆ. ಜನರು ಈತನನ್ನು ಭೇಟಿ ಮಾಡಲು ಬಂದಾಗ ಸಾಲ ಪಡೆದ ಮೇಲೆ ತೀರಿಸಲೇಬೇಕೆಂದು ತಿಳಿಸುತ್ತಾನೆ. ನಿಮಗೆ ಸಹಾಯ ಆಗಲೆಂದು ಸೂಪರ್ ಮಾರ್ಕೆಟ್‌ರವರನ್ನು ಕರೆಸಿದ್ದೀನಿ ಅವರೊಂದಿಗೆ ಅಗ್ರಿಮೆಂಟ್ ಮಾಡಿಕೊಳ್ಳಿ ಎಂದು ಹೇಳುತ್ತಾನೆ. ಒಬ್ಬಾತನು ಬೆಳೆ ಚೆನ್ನಾಗಿ ಬಂದಾಗ ಸೂಪರ್ ಮಾರ್ಕೆಟ್‌ನವರು ಒಳ್ಳೆ ಬೆಲೆ ಕೊಡಲ್ಲವೆಂದು ಪ್ರಶ್ನಿಸಿದಾಗ ಶಾಸಕನ ಸಂಗಡಿಗನು “ತಮ್ಮ, ದೊಡ್ಡೋರು ಮಾತನಾಡೊ ಹೊತ್ತಾಗ ಸಣ್ಣವ್ರು ನಡುಬಾಯಿ ಹಾಕ್ಬಾರ್ದು”[೩] ಎಂದು ಬಾಯಿ ಮುಚ್ಚಿಸುತ್ತಾನೆ. ಆದರೆ ಇಲ್ಲಿ ನಿಜವಾಗಿ ದೊಡ್ಡವರೆಂದರೆ ಯಾರಿಗೂ ಕೇಡು ಬಯಸದ ರೈತರು. ಭಯ ಹುಟ್ಟಿಸಿ, ರೈತರ ಬಾಯಿ ಮುಚ್ಚಿಸಿ ಭ್ರಷ್ಟಾಚಾರ ಮಾಡಲು ಹೊರಟಿರುವ ಶಾಸಕನು ಸಣ್ಣತನದ ನೀಚ ವ್ಯಕ್ತಿಯಾಗಿದ್ದಾನೆ.

ಕೆಲವು ದಿನಗಳ ನಂತರ ಜಮೀನಿನ ಬಳಿಯೇ ಬಂದ ಸೂಪರ್‌ಮಾರ್ಕೆಟ್‌ನವರು ರೈತನೊಬ್ಬನನ್ನು ಸಹಿ ಮಾಡುವಂತೆ ಇಲ್ಲವೇ ಸಾಲ ತೀರಿಸುವಂತೆ ಹೆದರಿಸುತ್ತಿರುತ್ತಾರೆ. ಅಲ್ಲಿಗೆ ಬಂದ ಬಸವನು ಸೂಪರ್ ಮಾರ್ಕೆಟ್‌ನವರೊಂದಿಗೆ ಹೊಡೆದಾಡಿ ಅವರನ್ನು ಓಡಿಸುತ್ತಾನೆ. ನಂತರ ಮನೆಗೆ ಬಂದು ತಾನು ವ್ಯವಸಾಯ ಮಾಡುವುದಾಗಿ ತಿಳಿಸಿದಾಗ ಆತನ ತಾಯಿ, ಸ್ನೇಹಿತ, ನೆರೆಹೊರೆಯವರೆಲ್ಲ ಬೇಡವೆನ್ನುತ್ತಾರೆ. ಬಸವನ ತಂದೆಯು ಸಾಯುವ ಮುನ್ನ ಪರಿಹಾರ ೨ ಲಕ್ಷ ಹಣವನ್ನು ಮಗ ಬಸವನಿಗೆ ಓದಲು ನೀಡಬೇಕೆಂದು ಹೇಳಿದ್ದ ವಿಷಯವನ್ನು ತಿಳಿಸುತ್ತಾರೆ. ಬಸವನು ಇದರಿಂದ ಮರುಗಿ ಮನೆ ಒಳಗೆ ಒಂದು ಕಡೆ ಕುಳಿತು ಒಬ್ಬನೇ ಅಳುತ್ತಾನೆ. ರೈತರ ನಿಕೃಷ್ಟ ಪರಿಸ್ಥಿತಿಯನ್ನು ಈ ಸನ್ನಿವೇಶ ತಿಳಿಸುತ್ತದೆ. ಪರಿಹಾರ ಹಣದಿಂದ ಕುಟುಂಬಕ್ಕೆ ಸಹಾಯ ಸಿಗಲೆಂದು ಜೀವವನ್ನು ಕಳೆದುಕೊಳ್ಳುವ ಹೀನಾಯ ಪರಿಸ್ಥಿತಿಯನ್ನು ನಮ್ಮ ವ್ಯವಸ್ಥೆ ತಂದೊಡ್ಡಿದೆ.

ರೈತರ ಎಲ್ಲ ಬಗೆಯ ಸಮಸ್ಯೆಗಳನ್ನು ತಿಳಿದ ಬಸವನು ಪ್ರಸಕ್ತ ವರ್ಷ ಸಮಸ್ಯೆಗಳನ್ನು ಬಗೆಹರಿಸಬೇಕೆಂಬ ನಿರ್ಧಾರ ಕೈಗೊಳ್ಳುತ್ತಾನೆ. ನೇಗಿಲು ಸಹಿತ ಬೇಸಾಯದ ಉಪಕರಣಗಳನ್ನು ಮನೆಯ ಕೋಣೆಯೊಂದರಲ್ಲಿ ಇಡುತ್ತಾನೆ. ಮುಂದಿನ ವರ್ಷದಿಂದ ಬೇಸಾಯ ಮಾಡುವುದಾಗಿ ನಿರ್ಧರಿಸಿ ಶಾಸಕ ವೀರಭದ್ರನ ಮನೆಗೆ ಹೋಗುತ್ತಾನೆ. ಸಾಲ ತೀರಿಸದ ಕಾರಣ ಬಸವನ ತಂದೆ ಬೆಳೆದಿದ್ದ ಜೋಳವನ್ನು

ವೀರಭದ್ರನು ಜಪ್ತಿ ಮಾಡಿಸಿರುತ್ತಾನೆ. ವೀರಭದ್ರನ ಕಡೆಯವರೊಂದಿಗೆ ಬಸವನು ಸೆಣಸಾಡಿ ಗಾಡಿಯಲ್ಲಿ ಜೋಳ ತೆಗೆದುಕೊಂಡು ಹೋಗುತ್ತಾನೆ. ಸಾಲ ತೀರಿಸಲು ಸಮಯ ಬೇಕೆಂದು ಕೇಳಿ ಬರುತ್ತಾನೆ. ದಲ್ಲಾಳಿಗಳ ಎ.ಪಿ.ಎಂ.ಸಿಗಳಿಗೆ ಪರ್ಯಾಯವಾಗಿ ರೈತನೇ ತನ್ನ ಉತ್ಪನ್ನಗಳನ್ನು ಮಾರುವ ರೈತ ಮಾರುಕಟ್ಟೆ ಸ್ಥಾಪಿಸಬೇಕೆಂದು ನಿರ್ಧರಿಸುತ್ತಾನೆ. ಎ.ಪಿ.ಎಂ.ಸಿ ಗೇಟ್‌ನ ಹೊರಭಾಗದಲ್ಲಿ 'ರೈತ ಮಾರಾಟ ಕೇಂದ್ರ' ಪ್ರಾರಂಭಿಸಿ ಧಾನ್ಯಗಳನ್ನು ಕಡಿಮೆ ಬೆಲೆಯಲ್ಲಿ ಮಾರುತ್ತಾನೆ. ಬಸವನ ಪ್ರಯತ್ನಕ್ಕೆ ಮತ್ತಷ್ಟು ರೈತರು ಒತ್ತಾಸೆಯಾಗಿ, ರೈತ ಮಾರುಕಟ್ಟೆಯ ಪರಿಕಲ್ಪನೆ ಯಶಸ್ಸು ಕಾಣುತ್ತದೆ. ಜನರೂ ಕೂಡ ಇಲ್ಲಿಯೇ ಖರೀದಿಸುತ್ತಾರೆ. ಮಾಧ್ಯಮಗಳಲ್ಲೂ ಇಲ್ಲಿ ಎ.ಪಿ.ಎಂ.ಸಿ ಗಿಂತ ಕಡಿಮೆ ಬೆಲೆಯಲ್ಲಿ ಮಾರಾಟವಾಗುತ್ತಿರುವ ಸುದ್ದಿ ಪ್ರಸಾರವಾಗುತ್ತದೆ. ದಲ್ಲಾಳಿಗಳು ಮತ್ತು ವೀರಭದ್ರನಿಗೆ ಎ.ಪಿ.ಎಂ.ಸಿಯಿಂದ ಬರುತ್ತಿದ್ದ ಕಮಿಷನ್ ನಿಂತು ಹೋಗುತ್ತದೆ. ಇದರಿಂದ ಕುಪಿತನಾದ ಶಾಸಕ ತಾನು ರೈತರಿಗೆ ಸಾಲ ಕೊಟ್ಟದ್ದನ್ನು ನೆಪ ಮಾಡಿಕೊಂಡು ಪೋಲಿಸರಿಂದ ಲಾಠಿ ಚಾರ್ಜ್ ಮಾಡಿಸುತ್ತಾನೆ. ಇದರಿಂದ ಬೇಸರಗೊಂಡು ಬಸವನ ಅಮ್ಮನ ಸಹಿತ ಊರಿನ ರೈತರೆಲ್ಲಾ ಸೂಪರ್ ಮಾರ್ಕೆಟ್‌ರವರ ಅಗ್ರಿಮೆಂಟ್‌ಗೆ ಸಹಿ ಹಾಕಿ ಬರುತ್ತಾರೆ. ರೈತರು ಸ್ವತಂತ್ರವಾಗಿ ವ್ಯಾಪಾರ ಮಾಡಲೂ ಬಿಡದ ವ್ಯವಸ್ಥೆಯ ಹುನ್ನಾರವನ್ನು ಕಾಣಬಹುದು.

ಊರಿನಲ್ಲಿ ಇದು ಮೊದಲ ಪೋಲಿಸ್ ಕೇಸ್ ಆದ ಕಾರಣ ಇದಕ್ಕೆ ಬಸವ ಕಾರಣನೆಂದು, ಬಸವ ನಾಳೆ ಮುಂಜಾನೆಯೊಳಗೆ ಊರು ಬಿಟ್ಟು ಹೋಗಬೇಕೆಂದು ಪಂಚಾಯ್ತಿಯಲ್ಲಿ ಠರಾವು ಹೊರಡಿಸುತ್ತಾರೆ. ವೀರಭದ್ರನ ಕಡೆಯವರು ಹೊರಟ ನಂತರ ಊರಿನ ಜನರು 'ರೈತರಿಗೆ ನೂರೆಂಟು ಸಮಸ್ಯೆ ಇವೆ, ನೀನು ತೊಂದರೆ ಮಾಡಿಕೊಳ್ಳಬೇಡ' ಎಂದು ಬಸವನಿಗೆ ತಿಳಿಸುತ್ತಾರೆ. ಅದಕ್ಕುತ್ತರಿಸಿದ ಬಸವನು "ಹಿಂಗಿರೋದಕ್ಕೆ ಆ ಗೌಡ್ನಂತೋರು ತಲೆ ಮೇಲೆ ಮೆಣಸಿನಕಾಯಿ ಹಿಂಡ್ತವ್ರೆ"[೪] ಎನ್ನುತ್ತಾನೆ. ಒಕ್ಕಲುತನ ಆರಂಭವಾದಾಗ ನಮ್ಮ ಹಿರಿಯರು ಸಗಣಿ ಗೊಬ್ರ, ಜವಾರಿ ಬೀಜ, ಎತ್ತು ಎಮ್ಮೆ ಆಕಳು ಸಾಕಿ ಸಾಲ ಮಾಡದೆ ಕೃಷಿ ಮಾಡುತ್ತಿದ್ದುದನ್ನು ನೆನಪಿಸುತ್ತಾನೆ. "ಕಂಪ್ನಿ ಗೊಬ್ರ, ಬೀಜ ಖರೀದಿಸಲು ಇವತ್ತು ತುಂಬಾ ಹಣ ಖರ್ಚು ಮಾಡುವುದಲ್ಲದೆ ಸೂಟುಬೂಟು ಹಾಕಿದವರಿಂದ ಬುದ್ಧಿ ಹೇಳ್ನೊಕ್ತಿದಿವಿ"[೫] ಎನ್ನುತ್ತಾನೆ. ನಮ್ಮ ಪರ ಯಾರ್‍ಯಾರೊ ಪ್ರತಿಭಟಿಸುತ್ತಾರೆ. ಸದನದಲ್ಲಿ ಚರ್ಚಿಸುತ್ತಾರೆ. ಮಾಧ್ಯಮದಲ್ಲಿ ಚರ್ಚಿಸುತ್ತಾರೆ. "ರೈತ ನಮ್ಮ ದೇಶದ ಬೆನ್ನೆಲುಬು, ಲಿವರ್, ಜಠರ, ಕರುಳು, ಕಿಡ್ನಿ, ಜೈ ಕಿಸಾನ್ ಎಂದೆಲ್ಲ ಹೇಳಿ ನಮ್ಮನ್ನು ಉಬ್ಬಿಸಿಬಿಟ್ಟಿದ್ದಾರೆ. ಆದರೆ ನಮಗೇನು ಬೇಕು ಎಂದು ಈವರೆಗೆ ಯಾರಾದರೂ ನಮ್ಮನ್ನು ಕೇಳಿದ್ದಾರೇನು"[೬] ಎಂದು ಪ್ರಶ್ನಿಸುತ್ತಾನೆ. ರೈತರ ಹೆಸರಿನಲ್ಲಿ ಭಾಷಣ ಮಾಡಿ ಸ್ವಾರ್ಥಿಗಳಾಗುವ ರಾಜಕಾರಣಿಗಳು, ನಕಲಿ ಹೋರಾಟಗಾರರ ಕಪಟತೆಯನ್ನು ಈ ಮಾತುಗಳು ಸೂಚಿಸುತ್ತವೆ.

"ವೀರಭದ್ರನು ಇದುವರೆಗೆ ನಮಗೆ ಲಾಭದಾಯಕ ಬೆಲೆ ಕೊಡಿಸಿಲ್ಲ. ರೈತರ ಹಣೆ ಬರಹ ಇಷ್ಟೆ. ಓಟು ಹಾಕಿ ಇಂತವರನ್ನು ಗೆಲ್ಲಿಸೋದು, ಕಂಪನಿಯವರಿಂದ ನೋಟು ಪಡೆಯೋದು. ಸಾಹುಕಾರನ ಕಡೆಯವರಿಂದ ಮೆಟ್ಟಿನ ಏಟು ತಿನ್ನೋದು, ಕೊನೆಗೆ ನೇಣು ಹಾಕೊಂಡು ಸಾಯೋದು. ಇವತ್ ನಮ್ಮಪ್ಪ, ನಾಳೆ ನಿಮ್ಮಪ್ಪ, ನಾಡಿದ್ ಇವ್ರಪ್ಪ ಆತ್ಮಹತ್ಯೆ ಮಾಡಿಕೊಂಡು ಸಾಯಬೇಕೆ"[೭] ಎಂದು ಪ್ರಶ್ನಿಸುತ್ತಾನೆ. ರೈತರು ಒಗ್ಗಟ್ಟಾಗಿದ್ದು ಹೋರಾಡಬೇಕೆಂದು ಜಾಗೃತಿ ಮೂಡಿಸುತ್ತಾನೆ. ಕೊನೆಗೆ ರೈತರು ಒಪ್ಪಿ ಹೋರಾಟಕ್ಕೆ ಅಣಿಯಾಗುತ್ತಾರೆ. ಸರ್ಕಾರವು ಹತ್ತಾರು ಜೆ.ಸಿ.ಬಿಗಳನ್ನು ರೈತ ಮಾರಾಟ ಕೇಂದ್ರ ಧ್ವಂಸಗೊಳಿಸಲು ಕಳುಹಿಸುತ್ತದೆ. ಇತ್ತ ನೂರಾರು ಎತ್ತಿನ ಗಾಡಿಗಳಲ್ಲಿ ರೈತರು ಎದುರಾಗುತ್ತಾರೆ. ರೈತರ ಮಾರುಕಟ್ಟೆ ಉಳಿಸುತ್ತಾರೆ. ನಂತರ ರೈತರು ಅಪಾರ ಸಂಖ್ಯೆಯಲ್ಲಿ ಸೇರಿ ಎ.ಪಿ.ಎಂ.ಸಿ ಆವರಣದಲ್ಲಿ ಪ್ರತಿಭಟಿಸುತ್ತಾರೆ. ರೈತರ ಒಗ್ಗಟ್ಟಿಗೆ ಹೆದರಿ ಪೋಲಿಸ್, ಸರ್ಕಾರದವರೂ ಮಣಿಯುತ್ತಾರೆ. ರೈತ ಮಾರುಕಟ್ಟೆ ಪುನರ್ ಸ್ಥಾಪನೆಯ ಕುರಿತು ಮಾಧ್ಯಮಗಳಲ್ಲಿ ಸುದ್ದಿಯಾಗುತ್ತದೆ. ಕಡಿಮೆ ಬೆಲೆಗೆ ತರಕಾರಿ ಧಾನ್ಯಗಳು ಸಿಗುತ್ತದೆ ಎಂದು ನಗರದ ಜನರೂ ಪ್ರಶಂಸಿಸುತ್ತಾರೆ. ವಿರೋಧ ಪಕ್ಷದವರು ಕೂಡ ಸರ್ಕಾರವನ್ನು ರೈತ ವಿರೋಧಿ ಎಂದು ಟೀಕಿಸಿ ಸರ್ಕಾರ ಈಗಲಾದ್ರೂ ರೈತರ ಕಡೆ ತಿರುಗಿ ನೋಡಲಿ ಎನ್ನುತ್ತಾರೆ. 'ಒಗ್ಗಟ್ಟಿನಲ್ಲಿ ಬಲವಿದೆ' ಎಂಬ ಗಾದೆಯಂತೆ ರೈತರೆಲ್ಲಾ ಒಗ್ಗೂಡಿದರೆ ನ್ಯಾಯ ಪಡೆಯಬಹುದೆಂದು ತಿಳಿಯಬಹುದು.

ಕೃಷಿ ಸಚಿವನು ರೈತ ಮುಖಂಡರೊಂದಿಗೆ ಸಭೆ ಕರೆದನು. ಕೃಷಿ ಕ್ಷೇತ್ರಕ್ಕೆ ಮುಂದಿನ ೨–೩ ವರ್ಷಗಳಲ್ಲಿ ನಮ್ಮ ದೇಶಕ್ಕೆ ವಿದೇಶಿ ಹೂಡಿಕೆ ಆರೂವರೆ ಲಕ್ಷ ಕೋಟಿ ಬರುತ್ತಿದ್ದು ನಮ್ಮ ರಾಜ್ಯಕ್ಕೆ ೧ ಲಕ್ಷ ಕೋಟಿ ಹೂಡಿಕೆ ಬರಬಹುದೆಂದು ತಿಳಿಸುತ್ತಾನೆ. ನಮ್ಮ ದೇಶದ ಆರ್ಥಿಕತೆಗೆ ಕೃಷಿ ಕ್ಷೇತ್ರದ ಕೊಡುಗೆ ಕೇವಲ ೧೫%, ದೇಶದ ಅರ್ಧದಷ್ಟು ಜನ ರೈತರಿದ್ದರೂ ಇಷ್ಟು ಕಡಿಮೆ ಕೊಡುಗೆ, ಹೀಗಾದ್ರೆ ದೇಶ ಹೇಗೆ ಉದ್ಧಾರ ಆಗುತ್ತದೆ ಎಂದು ಪ್ರಶ್ನಿಸುತ್ತಾನೆ. ಪ್ರತಿ ವರ್ಷ ಲಕ್ಷಾಂತರ ಯುವಕರು ಪದವಿ ಮುಗಿಸುತ್ತಾರೆ. ಹಳ್ಳಿಲಿ ನಮ್ಮ ಜನ ನಿರುದ್ಯೋಗದಿಂದ ಬಳಲುತ್ತಿದ್ದು ನಗರಗಳ ಕಂಪನಿಗಳಲ್ಲಿ ಕೆಲಸಕ್ಕೆ ಸೇರಿದರೆ ಉತ್ಪಾದಕತೆ ಸುಧಾರಿಸಿ ದೇಶದ ಆರ್ಥಿಕ ಸ್ಥಿತಿ ಕೂಡ ಸುಧಾರಿಸುವುದಾಗಿ ತಿಳಿಸುತ್ತಾನೆ. ಇದು ಬರಿ ನಮ್ಮ ರಾಜ್ಯ, ದೇಶ ಮಾತ್ರವಲ್ಲ ಪ್ರಪಂಚದ ಆರ್ಥಿಕ ಪರಿಸ್ಥಿತಿ ಇದೇ ದಿಕ್ಕಿನಲ್ಲಿ ನಡೆಯುತ್ತಾ ಇರುವುದೆಂದು ತಿಳಿಸುತ್ತಾನೆ. 'ನೀವು ಅರ್ಥ ಮಾಡ್ಕೊಂಡು ನಿಮ್ ರೈತ್ರುಗು ಅರ್ಥ ಮಾಡಿಸಿ ಹೇಳ್ಬೇಕು' ಎಂದು ತಿಳಿಸುತ್ತಾನೆ. ಕೃಷಿ ಸಚಿವ ಇಷ್ಟು ಮಾತನಾಡಿದರೂ ರೈತ ಮುಖಂಡರು ಮೌನವಾಗಿರುವಲ್ಲಿ ರೈತ ಮುಖಂಡರು ಗೊಂದಲಕ್ಕೀಡಾದರೋ, ಇಲ್ಲ ತಮ್ಮನ್ನು ಮಾರಿಕೊಂಡರೋ ಎಂದು ಅನುಮಾನ ಮೂಡುತ್ತದೆ.

ರೈತ ಮಾರುಕಟ್ಟೆಯಿಂದ ಹೆಸರುವಾಸಿಯಾದ ಬಸವನನ್ನು ಮಾಧ್ಯಮವೊಂದು ವಿಶೇಷ ವ್ಯಕ್ತಿಯಾಗಿ ಕರೆಸಿ ಸಂದರ್ಶಿಸುತ್ತಾರೆ. ಎಲ್ಲಾ ಹುದ್ದೆಗಳಿಗೂ ಸೇರುವ ಮುನ್ನ ಸಂಬಳ ನಿಗದಿ ಪಡಿಸುವಂತೆ ರೈತರ ಬೆಳೆಗೂ ಬೇರೆ ನಿರ್ಧಾರವಾಗಬೇಕೆನ್ನುತ್ತಾನೆ. ಬ್ರಾಂಡೆಡ್ ಬಟ್ಟೆಗಳ ಬೆಲೆಯನ್ನು ತಯಾರಕರು ನಿರ್ಧರಿಸುವಂತೆ ಬೆಳೆ ಬೆಳೆಯುವ ರೈತ ಅದರ ಬೆಲೆ ನಿರ್ಧರಿಸಬೇಕೆನ್ನುತ್ತಾನೆ. ಬೆಲೆ ಕುಸಿದಾಗ ರೈತರು ತರಕಾರಿಗಳನ್ನು ರೋಡಿಗೆ ಸುರಿಯುತ್ತಾರೆ. ಆದರೆ ಚಿಪ್ಸ್, ಕೂಲ್ ಡ್ರಿಂಕ್ಸ್, ಚಾಕಲೇಟ್ ತಯಾರಕ ಕಂಪನಿಯವರು ರೋಡಿಗೆ ಚೆಲ್ಲಿರೊ ಉದಾಹರಣೆ ಇಲ್ಲವೆಂದು ತಿಳಿಸುತ್ತಾನೆ. ದಲ್ಲಾಳಿಗಳು, ರಸಗೊಬ್ಬರ, ಕ್ರಿಮಿನಾಶಕ, ಆಹಾರ ಉತ್ಪನ್ನ ಮಾಡೋರು ಪ್ರತಿವರ್ಷ ಉದ್ಧಾರ ಆಗುತ್ತಿದ್ದಾರೆ. ರೈತ ಮಾತ್ರ ಇದ್ದಲ್ಲೇ ಇದ್ದಾನೆ. ಇಂತಹ ಪರಿಸ್ಥಿತಿಯಿಂದಲೇ ರೈತರು ಬೇಸಾಯ ಬಿಟ್ಟು ನಗರ ಸೇರುತ್ತಿದ್ದಾರೆ ಎನ್ನುತ್ತಾನೆ. ಟ್ಯಾಕ್ಸಿ ಡ್ರೈವರ್ಸ್, ಬಿಲ್ಡಿಂಗ್ ಕಟ್ಟೋರು, ಸೆಕ್ಯುರಿಟಿ ಗಾರ್ಡ್ಸ್, ಫುಡ್ ಡೆಲಿವರಿ ಬಾಯ್ಸ್‌ಗಳೂ ಕೂಡ ಸ್ವಂತ ಹೊಲ ಹೊಂದಿದ್ರೂ ಕುಟುಂಬ ಬಿಟ್ಟು ನಗರದಲ್ಲಿ ಒದ್ದಾಡ್ತಿದ್ದಾರೆ. ದೇಶದ ಅರ್ಧದಷ್ಟು ಜನ ಕೃಷಿ ಮಾಡುತ್ತಿದ್ದು ಅವರೆಲ್ಲರು ನಷ್ಟದಲ್ಲಿದ್ದರೂ ಕೂಡ ನಾವು ಸಮೃದ್ಧನಾಡು, ಆರೋಗ್ಯಕರ ಸಮಾಜ ಅಂತೆಲ್ಲಾ ಮಾತಾಡ್ತಿದೀವಿ ಎಂದು ಹೇಳುತ್ತಾನೆ. ಇದಕ್ಕೆಲ್ಲ ಒಂದು ಪರಿಹಾರ ಅಂದ್ರೆ ಏನು ಎಂದು ಕೊನೆಯದಾಗಿ ನಿರೂಪಕಿ ಕೇಳಿದಾಗ “ರೈತರು ಬೆಳೆಯುವ ಮೊದಲೇ ಆ ಬೆಳೆಯ ಒಂದು ಲಾಭದಾಯಕ ಬೆಲೆ ಊರಿನ ಗ್ರಾಮ ಪಂಚಾಯಿತಿ ಬೋರ್ಡ್‌ನಲ್ಲಿ ಒಂದು ಬೀಳ್ಬೇಕು. ರೈತರು ಬೆಳೆ ಬೆಳೆದ ಮೇಲೆ ಅದನ್ನು ಎ.ಪಿ.ಎಂ.ಸಿ, ಸೂಪರ್ ಮಾರ್ಕೆಟ್, ಎಲ್ಲಿಗಾದರೂ ಸರ್ಕಾರ ಮಾರಿಕೊಳ್ಳಲಿ. ಆದರೆ ರೈತರಿಗೆ ಲಾಭದಾಯಕ ಬೆಲೆ ಸಿಗಬೇಕು ಇದು ಕಾನೂನಾಗಬೇಕು”[೮] ಎನ್ನುತ್ತಾನೆ. ಕಾರ್ಯಕ್ರಮದಲ್ಲಿ ಕೇಳುತ್ತಿದ್ದ ಜನರು ಚಪ್ಪಾಳೆ ತಟ್ಟಿದರು. ಬೆಂಬಲ ಬೆಲೆ ಸಿಕ್ಕರೆ ರೈತರು ಉಳಿದ ತಮ್ಮ ಸಮಸ್ಯೆಗಳನ್ನು ತಾವೇ ಬಗೆಹರಿಸಿಕೊಳ್ಳುತ್ತಾರೆ. ಆದ ಕಾರಣ ಬಸವನು ಬೆಲೆ ನಿಗದಿ ಕಾನೂನನ್ನು ಪ್ರಮುಖ ಬೇಡಿಕೆಯಾಗಿ ಘೋಷಿಸುತ್ತಾನೆ.

ಸಂದರ್ಶನ ಮುಗಿದ ನಂತರ ತನ್ನ ಸ್ನೇಹಿತನೊಂದಿಗೆ ಬಸವನು ಬಸ್ ನಿಲ್ದಾಣಕ್ಕೆ ಬೈಕ್‌ನಲ್ಲಿ ಹೋಗುತ್ತಿರುವಾಗ ಶಾಸಕ ವೀರಭದ್ರ ಮತ್ತು ಆತನ ಕಡೆಯವರು ಹಿಂಬಾಲಿಸುತ್ತಾರೆ. ನಂತರ ಬಸವನನ್ನು ಹಿಡಿದು ಶಾರ್ಟ್ ಸರ್ಕ್ಯೂಟ್‌ನಿಂದ ರೈತ ಮಾರುಕಟ್ಟೆ ಸುಟ್ಟು ಹೋಗಿರುವ ವಿಷಯವನ್ನು ವೀರಭದ್ರನು ತಿಳಿಸುತ್ತಾನೆ. ಇದನ್ನು ನಾವೇ ಮಾಡಿಸಿದ್ದು ಎಂದು ಹೇಳುತ್ತಾನೆ. ಬಸವನಿಗೆ ನಿನ್ನನ್ನು ಸಾಯಿಸುತ್ತೇವೆ ಎಂದು ಹೇಳಿದಾಗ ಬಸವನು ತಾಕತ್ತಿದ್ದರೆ ಸಾಯಿಸಿ ಎಂದು ಆಕ್ರೋಶದಿಂದ ನುಡಿಯುತ್ತಾನೆ. ವೀರಭದ್ರನು ‘ರೈತ್ರು ಸಪೋರ್ಟ್ ಇದಾರಂತ ಹೀಗಾಡ್ತಿದ್ಯ ಕ್ವಾಟ್ರು ಎಣ್ಣೆ, ೨ ಪೀಸ್ ಚಿಕನ್, ೫೦೦ ರೂ ಕೊಟ್ರೆ ನನ್ನೆ ಹೆಗಲ್ ಮೇಲ್ ಕುಡ್ಕಂಡ್ ಕುಣ್ಸೊ ಜನ ನಿನ್ ಜೋಡಿ ಎಷ್ಟುದಿನ ಇರ್ತಾರೆ ನಾನ್ನೊಡ್ತೀನಿ’ ಎಂದು ಹೇಳಿ ಬಸವನನ್ನು ಬಿಟ್ಟು ಹೊರಡುತ್ತಾರೆ. ಕೊಲ್ಲಲು ಬಂದವರು ಹೀಗೆ ಕೊಲ್ಲದೆ ಹೋದದ್ದರಿಂದ

ಬಸವನಿಗೂ ಅಚ್ಚರಿಯಾಗುತ್ತದೆ. ಬಸವನಿಗೂ ಶಾಸಕನಿಗೂ ಮಾರುಕಟ್ಟೆ ವಿಚಾರದಲ್ಲಿರುವ ವೈರತ್ವ ರೈತರಿಗೆಲ್ಲಾ ತಿಳಿದಿದ್ದರಿಂದ ಬಸವನ್ನು ಸಾಯಿಸಿದರೆ ಮುಂದೆ ತೊಂದರೆಯಾಗಬಹುದೆಂದು ಶಾಸಕ ಬಸವನನ್ನು ಸಾಯಿಸದೆ ಹೋಗುತ್ತಾನೆ.

ಕೃಷಿ ಮಂತ್ರಿಯು ಶಾಸಕ ವೀರಭದ್ರನನ್ನು ಕರೆಸಿಕೊಂಡು ಮಾಧ್ಯಮಗಳಲ್ಲಿ ಬಸವ ಮತ್ತು ರೈತರ ಮಾರುಕಟ್ಟೆಯ ಚರ್ಚೆ ಆಗುತ್ತಿರುವುದರ ಕುರಿತು ಕೋಪದಿಂದ ಪ್ರಶ್ನಿಸುತ್ತಾನೆ. ನಾನು ಮುಂದೆ ಪಕ್ಷದ ರಾಜ್ಯಾಧ್ಯಕ್ಷನಾಗಬೇಕೆಂದುಕೊಂಡಿದ್ದು ನಮ್ಮ ಪಕ್ಷದ ಇನ್ನೊಂದು ಗುಂಪು ದೆಹಲಿಯಲ್ಲಿ ಲಾಬಿ ಶುರು ಮಾಡಿದೆ. ನಾನು ಕೃಷಿ ಮಂತ್ರಿಯಾಗಿರುವುದರಿಂದ ನನ್ನ ಮುಂದಿನ ಭವಿಷ್ಯಕ್ಕೆ ಧಕ್ಕೆ ತರಬಹುದು. ಮಾಧ್ಯಮದವರಿಗೆ ಹಣ ನೀಡಿ ಸುಮ್ಮನಿರಿಸುವಂತೆ ತಿಳಿಸುತ್ತಾನೆ. ರಾಜಕಾರಣಿಗಳು ಪ್ರಶ್ನೆ ಮಾಡುವವರನ್ನು, ಹೋರಾಡುವವರನ್ನು ಹತ್ತಿಕ್ಕಲು ಪ್ರಯತ್ನಿಸುವುದನ್ನು ಇಲ್ಲಿ ಕಾಣಬಹುದು. ಆಮಿಷವೊಡ್ಡಿ ಮಾಧ್ಯಮದವರನ್ನೂ ನಿಯಂತ್ರಿಸುವಂತೆ ಹೇಳುವ ಮೂಲಕ ತಮ್ಮ ಏಳಿಗೆಗಾಗಿ ಎಂತಹ ಜನವಿರೋಧಿ, ರೈತ ವಿರೋಧಿ ಕೆಲಸ ಮಾಡಲು ಸಿದ್ಧರಿರುವುದನ್ನು ಕಾಣಬಹುದು.

ರೈತ ಮಾರುಕಟ್ಟೆಯ ಬಳಿ ಬಂದ ಬಸವನು ಸುಟ್ಟು ಹೋದ ಭಾಗಗಳನ್ನು ಸರಿಪಡಿಸುವುದನ್ನು ಗಮನಿಸುತ್ತಾನೆ. ಆಗ ಅಲ್ಲಿಗೆ ಬಂದು ಭೂಮಿಕ ಈ ಹಿಂದೆ ತಾನು ಕೆಲಸ ಮಾಡುತ್ತಿದ್ದ ಮಾಧ್ಯಮ ಸಂಪಾದಕ ನೀಡಿದ್ದ ವಿವಾದಾತ್ಮಕ ಪ್ರಶ್ನೆಗಳನ್ನು ಬಸವನ ಸಂದರ್ಶನದಲ್ಲಿ ಕೇಳದ್ದಕ್ಕಾಗಿ ಕೆಲಸದಿಂದ ತೆಗೆದು ಹಾಕಿರುವ ವಿಷಯವನ್ನು ತಿಳಿಸುತ್ತಾಳೆ. ಮುಂದೆ ಇಲ್ಲೇ ಇದ್ದುಕೊಂಡು ಯುಟ್ಯೂಬ್ ನ್ಯೂಸ್ ಚಾನಲ್ ನಡೆಸುವುದಾಗಿ ಹೇಳುತ್ತಾಳೆ. ರೈತ ಮಾರುಕಟ್ಟೆಯ ವಿಷಯಗಳ ಕುರಿತು ಯುಟ್ಯೂಬ್‌ನಲ್ಲಿ ವೀಡಿಯೋಗಳನ್ನು ಹರಿಯಬಿಡುತ್ತಾಳೆ. ಆದರೆ ಹೀಗೆ ಆಗುವ ಸಂದರ್ಭಗಳು ವಾಸ್ತವಕ್ಕೆ ದೂರ. ಚಲನಚಿತ್ರದ ನಾಯಕಿಯ ಪಾತ್ರವನ್ನು ಹೆಚ್ಚು ತೋರಿಸಲು ನಿರ್ದೇಶಕರು ಈ ಸಂದರ್ಭಗಳನ್ನು ತಂದಿದ್ದಾರೆ.

ಬಸವನನ್ನು ಹೇಗಾದರೂ ಮಾಡಿ ಹತ್ತಿಕ್ಕಲೇಬೇಕೆಂದು ಸಂಚು ಹೂಡುವ ಶಾಸಕ ವೀರಭದ್ರನು ಬಸವನಿಗೆ ರಾಜ್ಯೋತ್ಸವದಲ್ಲಿ 'ಕರ್ನಾಟಕ ಯುವ ಚೇತನ ಪ್ರಶಸ್ತಿ' ದೊರಕುವಂತೆ ಮಾಡುತ್ತಾನೆ. ಪ್ರಶಸ್ತಿ ದೊರೆತ ಕಾರಣದಿಂದ ಊರಿನಲ್ಲಿ ಬಸವನನ್ನು ಸನ್ಮಾನ ಮಾಡುತ್ತಾರೆ. ಇತ್ತ ಬಸವನ ಮನೆಯ ಮೇಲೆ ಐ.ಟಿ(ಆದಾಯ ತೆರಿಗೆ) ದಾಳಿಯಾಗುತ್ತದೆ. ಮನೆಯಲ್ಲಿ ಬಾಂಡ್ ಪೇಪರ್ಸ್ ಮತ್ತು ಹಣ ಸಿಗುತ್ತದೆ. ಹಣ ಮತ್ತು ಬಾಂಡ್ ಪೇಪರ್ಸ್‌ನ್ನು ಶಾಸಕನು ತನ್ನ ಕಡೆಯವರನ್ನು ಕಳುಹಿಸಿ ಬಸವನ ಮನೆಯಲ್ಲಿ ಇಡಿಸುತ್ತಾನೆ. ರೈತರ ಜಮೀನಿನ ಪತ್ರಗಳೂ ಸಿಗುತ್ತವೆ. ಬಸವನನ್ನು ಪೊಲೀಸರು ಬಂಧಿಸುತ್ತಾರೆ. ಊರಿನಲ್ಲಿ ಹೆಂಗಸರೆಲ್ಲಾ ಬಸವನ ಕುರಿತು ಟೀಕಿಸುತ್ತಾರೆ. ಬಸವನ ಚಿಕ್ಕಮ್ಮ ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸಿದಾಗ ಮಗಳು ಬಂದು ಕಾಪಾಡುತ್ತಾಳೆ. ವೀರಭದ್ರನ ಕುತಂತ್ರಗಳು ಹೀಗೆ ಮುಂದುವರಿಯುತ್ತವೆ.

ಭೂಮಿಕಳು ತನ್ನ ಯುಟ್ಯೂಬ್ ನ್ಯೂಸ್ ಚಾನೆಲ್‌ನಲ್ಲಿ ರೈತ ಮಾರುಕಟ್ಟೆಯು ಮುಚ್ಚಿ ಹೋದ ವಿಷಯ ತಿಳಿಸುತ್ತಾಳೆ. ರೈತರೆಲ್ಲರೂ ಫಸಲು, ಧಾನ್ಯಗಳನ್ನು ಆತುರದಲ್ಲಿ ಮಾರಿ ಊರಿಗೆ ಹೊರಡುತ್ತಿರುವುದನ್ನು ತಿಳಿಸುತ್ತಾಳೆ. 'ನಾವೆಲ್ಲಾ ಒಟ್ಟಾಗಿ ಸಮಾಜದ ಒಳಿತಿಗಾಗಿ ಮಾಡಿದ ಪ್ರಯತ್ನವನ್ನು ವ್ಯವಸ್ಥಿತವಾಗಿ ಹತ್ತಿಕ್ಕಿದ್ದಾರೆ' ಎಂದು ವ್ಯವಸ್ಥೆಯ ಕುರಿತು ತಿಳಿಸುತ್ತಾಳೆ.

ಈ ಹಿಂದೆ ರೈತರ ಉದ್ಧಾರ ಮಾಡುವ ಯೋಜನೆ ಸಿದ್ಧಪಡಿಸಿರುವುದಾಗಿ ಬಸವನೊಂದಿಗೆ ಚರ್ಚಿಸಿದ್ದ ರಾಜಶೇಖರ್ ಎಂಬಾತ ನ್ಯಾಯಾಲಯದಲ್ಲಿ ಬಸವನ ಮೇಲೆ ಸುಳ್ಳು ಆರೋಪ ಮಾಡುತ್ತಾನೆ. "ರೈತ ಮಾರುಕಟ್ಟೆಯ ಕಾಂಟ್ರಾಕ್ಟ್ ಮತ್ತು ರೈತರ ಕೃಷಿ ಭೂಮಿಯನ್ನು ರಿಯಲ್ ಎಸ್ಟೇಟ್‌ಗೆ ಕೊಡಿಸುತ್ತೇನೆ ಎಂದು ಹೇಳಿದರು. ೧೫೦ ಎಕರೆ ಭೂಮಿ ಕೊಡಿಸಿದರು. ೧೦% ಕಮಿಷನ್ ನಂತೆ ೨೫ ಕೋಟಿಗೆ ಡೀಲ್ ಆಗಿದೆ. ೫೦ ಕೋಟಿ ಅಡ್ವಾನ್ಸ್ ಕೊಟ್ಟಿದ್ದು, ಅವರ ಸಾಫ್ಟ್‌ವೇರ್ ಕಂಪನಿಗೆ ೨ ಕೋಟಿ ಕೊಟ್ಟಿದ್ದೇವೆ" ಎಂದು ನಕಲಿ ದಾಖಲೆಗಳನ್ನು ಸಲ್ಲಿಸುತ್ತಾನೆ. ನಂತರ ಎರಡೂ ಕಡೆಯ ವಕೀಲರ ವಾದ ಆಲಿಸಿದ ನ್ಯಾಯಾಲಯ ರಾಜಶೇಖರ್ ಮತ್ತು ಬಸವನನ್ನು ೧೫ ದಿನ ನ್ಯಾಯಾಂಗ ಬಂಧನಕ್ಕೆ ಒಪ್ಪಿಸುತ್ತದೆ. ದಾಖಲೆ ಮರುಪರಿಶೀಲನೆ ನಡೆಸಲು ತಿಳಿಸುತ್ತದೆ. ರೈತರ ಪರವಾಗಿ ಕೆಲಸ ಮಾಡುತ್ತಿದ್ದೇವೆ ಎನ್ನುವ ಎಲ್ಲರನ್ನು ನಂಬಬಾರದೆಂದು ಇದರಿಂದ ತಿಳಿಯಬಹುದು. ರಾಜಕಾರಣಿಗಳು ನಕಲಿ ಜನರನ್ನು ಕಳುಹಿಸಿ ನೈಜ ಹೋರಾಟಗಾರರನ್ನು ಹತ್ತಿಕ್ಕುವ ಹುನ್ನಾರವನ್ನು ಇಲ್ಲಿ ಕಾಣಬಹುದು.

ಬಸವನು ಜೈಲಿನಲ್ಲಿದ್ದಾಗ ಅಲ್ಲಿಗೆ ಪತ್ರಿಕೆಯ ವರದಿಗಾರನೊಬ್ಬ ಬಂದು ಬಸವನ ತಂದೆ ಸಾಯುವ ಮುನ್ನ ನೀಡಿದ್ದ ಖರ್ಚು–ವೆಚ್ಚದ ಆಯವ್ಯಯ ಪತ್ರವನ್ನು ಕೊಡುತ್ತಾನೆ. ಪೇಪರ್‌ನಲ್ಲಿ ಪ್ರಕಟಿಸಿರಲು ಸಾಧ್ಯವಾಗದ ವಿಷಯ ತಿಳಿಸಿ ಹೊರಡುತ್ತಾನೆ. ನಂತರ ಪೊಲೀಸ್ ವಾಹನದಲ್ಲಿ ನಗರಕ್ಕೆ ಹೋಗುತ್ತಿರುವಾಗ ಬಸವನು ಪೊಲೀಸರಿಗೆ ಊರಿಗೆ ಹೊರಡುವುದಾಗಿ ತಿಳಿಸಿ ಬೇಡಿಕೊಳ್ಳುತ್ತಾನೆ. ಪೂರ್ತಿ ವಿಷಯ ತಿಳಿದಿದ್ದ ಪೊಲೀಸರು 'ನೀನಿಲ್ಲಿಂದ ಹೋದ್ರೆ ನಂ ಕೆಲ್ಸ ಹೋಗ್ತೈತೆ, ಹೋಗ್ಲಿಲ್ಲ ಅಂದ್ರೆ ತುಂಬಾ ರೈತರಿಗೆ ತೊಂದರೆ ಆಗುತ್ತೆ. ಪೊಲೀಸ್ ಆಗುವ ಮುನ್ನ ನಾವೂ ರೈತ್ರೆ, ಮತ್ತೆ ಕಾಣಿಸ್ಕೊಬೇಡ ಕಂಡ್ರೆ ಗುಂಡ್ ಹೊಡೆಯಬೇಕಾಗುತ್ತೆ' ಎಂದು ಹೇಳಿ ಬೇಡಿ ಬಿಚ್ಚಿ ಕಳಹಿಸುತ್ತಾರೆ. ಪೊಲೀಸರ ಈ ಕೆಲಸವು ಕಾನೂನಿಗೆ ವಿರುದ್ಧವಾದರೂ ಅವರ ರೈತಪರ ಕಾಳಜಿ ಗಮನಾರ್ಹ.

ಬಸವನು ಒಂದು ಗೌಪ್ಯ ಸ್ಥಳದಲ್ಲಿದ್ದುಕೊಂಡು ಭೂಮಿಕಳ ಯುಟ್ಯೂಬ್ ನ್ಯೂಸ್ ಚಾನೆಲ್‌ನಿಂದ ಒಂದು ವೀಡಿಯೋ ಹರಿಯಬಿಡುತ್ತಾನೆ. ಅದರಲ್ಲಿ ಆತನ ತಂದೆಯು ಪ್ರೆಸ್‌ಗೆ ಕೊಟ್ಟಿದ್ದ ಆಯವ್ಯಯ ಪತ್ರವನ್ನು ತೋರಿಸುತ್ತಾನೆ. ನನ್ನ ತಂದೆಯು ೫೦ ಸಾವಿರ ಖರ್ಚು ಮಾಡಿ ಈರುಳ್ಳಿ ಬೆಳೆದಿದ್ದರು. ಆದರೆ ಅವರಿಗೆ ವಾಪಸ್ ಬಂದ ಹಣ ೨೦ ಸಾವಿರ ಮಾತ್ರ. ಇದರಿಂದ ಅವರು ಆತ್ಮಹತ್ಯೆ ಮಾಡಿಕೊಂಡರು. "ನಮ್ಮ ರಾಜ್ಯದ ೪ ಕೋಟಿ ಜನರ ಆಯವ್ಯಯ ಇದೇ ರೀತಿ ಇದೆ. ಬೆಳೆದ ಬೆಳೆಗೆ ಬೆಲೆ ಸಿಗದಿದ್ರೆ

ಸರ್ಕಾರಕ್ಕೆ ಬಿಸಿ ಮುಟ್ಟಿಸಲೇಬೇಕು. ನಾವು ಹೈವೇ ಬಂದ್ ಮಾಡಬೇಕಿಲ್ಲ, ಟೈರ್ ಸುಡಬೇಕಿಲ್ಲ, ಸರ್ಕಾರಕ್ಕೆ ತೆರಿಗೆ ಸಲ್ಲುವಂತಹ ಯಾವುದೇ ಕೆಲಸ ಮಾಡಬೇಡಿ”[೧೦] ಎಂದು ಹೇಳುತ್ತಾನೆ. ನಂತರ ರೈತರು ಬಸ್ಸು, ರೈಲು ಪ್ರಯಾಣಕ್ಕೆ ಶುಲ್ಕ ನೀಡಲು, ಸಾಲ ವಾಪಸ್ ಕಟ್ಟಲು, ವಿದ್ಯುತ್ ಬಿಲ್ ಕಟ್ಟಲು, ಪೆಟ್ರೋಲ್‌ಗೆ ಹಣ ನೀಡಲು ನಿರಾಕರಿಸಿ ಸರ್ಕಾರಕ್ಕೆ ನಷ್ಟ ಉಂಟು ಮಾಡುತ್ತಾರೆ. ಹಲವು ಕಡೆಗಳಲ್ಲಿ ಬಸ್, ರೈಲು ಟಿಕೆಟ್ ತೆಗೆದುಕೊಳ್ಳದ ರೈತರ ಬಂಧನವಾಗುತ್ತದೆ. ಆಗ ಇನ್ನುಳಿದ ರೈತರು ತಾವೇ ಪೊಲೀಸ್ ಠಾಣೆಗಳಿಗೆ ನುಗ್ಗಿ ನಮ್ಮನ್ನು ಬಂಧಿಸಿ ಎಂದು 'ಜೈಲ್ ಭರೋ ಅಭಿಯಾನ' ನಡೆಸುತ್ತಾರೆ. ರೈತರು ಒಗ್ಗಟ್ಟಿಂದ ಇದ್ದರೆ ಹೋರಾಟವನ್ನು ದೊಡ್ಡ ಮಟ್ಟಕ್ಕೆ ಒಯ್ಯಬಹುದೆಂದು ಇಲ್ಲಿ ತಿಳಿಯಬಹುದು.

ರೈತರು ತಮ್ಮ ಜಮೀನುಗಳನ್ನು ಮುಖ್ಯಮಂತ್ರಿ ಹೆಸರಿಗೆ ಬರೆದುಕೊಡುವ ಮೂಲಕ ಚಳವಳಿಯನ್ನು ನಿರ್ಣಾಯಕ ಹಂತಕ್ಕೆ ಒಯ್ಯುತ್ತಾರೆ. ದೆಹಲಿಯಿಂದ ಆಡಳಿತ ಪಕ್ಷದ ವರಿಷ್ಠರು ಬೆಂಗಳೂರಿಗೆ ಬಂದು ಚರ್ಚಿಸುತ್ತಾರೆ. ಮಾಧ್ಯಮಗಳಲ್ಲಿ 'ರೈತರು ಇದ್ದಲ್ಲಿಯೇ ಸರ್ಕಾರವನ್ನು ಬೆಚ್ಚಿಬೀಳಿಸಿದ್ದಾರೆ. ಇದು ಅಸಹಕಾರ ಚಳುವಳಿಯನ್ನು ನೆನಪಿಸುವಂತಿದೆ' ಎಂದು ಸುದ್ದಿಯಾಗುತ್ತದೆ. ಬಸವ ಇರುವ ಜಾಗ ತಿಳಿದು ಆಡಳಿತ ಪಕ್ಷದ ಕಡೆಯ ಗೂಂಡಾಗಳು ಬಸವನ ಮೇಲೆ ಹಲ್ಲೆಗೆ ಯತ್ನಿಸುತ್ತಾರೆ. ಅವರಿಗೆ ಹೊಡೆದು ಬುದ್ಧಿ ಕಲಿಸಿದ ಬಸವನು “ನಿಮ್ಮ ಅಪ್ಪಂದಿರು ರೈತರಲ್ಲವೇ, ನೀವು ಒಕ್ಕಲ್ತನ ಮಾಡಲ್ಲವೇ, ನೀವು ರೈತ್ರು ಮಕ್ಳಲ್ವೇ”[೧೧] ಎಂದು ಹೇಳಿ ಕಳುಹಿಸುತ್ತಾನೆ. ಈ ಹಿಂದೆ ಬಸವನ ಮನೆಯ ಮೇಲೆ ಐ.ಟಿ. ದಾಳಿಯಾದ ವಿಚಾರಣೆ ನಡೆದು ವಾದ–ವಿವಾದ ಆಲಿಸಿದ ನ್ಯಾಯಾಲಯವು ಬಸವನನ್ನು ನಿರಪರಾಧಿ ಎಂದು ಘೋಷಿಸುತ್ತದೆ. ಸಂತಸಕ್ಕೆ ಇನ್ನೊಂದು ಸೇರ್ಪಡೆ ಎಂಬಂತೆ ರೈತರ ಹೋರಾಟಕ್ಕೆ ಮಣಿದ ಸರ್ಕಾರ ರೈತರ ಬೆಳೆಗೆ ಮುಂಗಡ ಬೆಲೆ ನಿಗದಿ ಪಡಿಸುವ ಮಸೂದೆ ಜಾರಿಗೊಳಿಸುತ್ತದೆ. ಹೀಗೆ ಸುಖಾಂತ್ಯದೊಂದಿಗೆ ಚಲನಚಿತ್ರವು ಕೊನೆಗೊಳ್ಳುತ್ತದೆ.

ಮೂರು ಕೃಷಿ ಕಾಯ್ದೆಗಳನ್ನು ರದ್ದು ಪಡಿಸಲು ಆಗ್ರಹಿಸಿ ೨೦೨೧–೨೨ರಲ್ಲಿ ಉತ್ತರ ಭಾರತವನ್ನು ಕೇಂದ್ರವಾಗಿಸಿಕೊಂಡು ದೆಹಲಿಯಲ್ಲಿ ನಡೆದ ರೈತರ ಪ್ರತಿಭಟನೆಯು ಸ್ವಾತಂತ್ರ್ಯಾನಂತರ ದೇಶ ಕಂಡ ಬಹು ದೊಡ್ಡ ಚಳುವಳಿ. “ಚಳವಳಿ ನಿರತ ರೈತರು ಗಾಂಧಿಯ ವಿವೇಕ ಹಾಗೂ ಅಹಿಂಸೆಯ ಅನುಸಂಧಾನದಂತೆ ಕಾಣಿಸಿದರೆ, ಸತ್ಯಾಗ್ರಹವನ್ನು ಹತ್ತಿಕ್ಕಲು ಪ್ರಯತ್ನಿಸಿದ ಅಧಿಕಾರಶಾಹಿಯು ಬ್ರಿಟಿಷ್ ಪ್ರಭುತ್ವದ ಪಳೆಯುಳಿಕೆಯಂತೆ ಕಾಣಿಸುತ್ತದೆ. ಈ ವಿರೋಧಾಭಾಸ ಕ್ಷೇತ್ರಪತಿ ಚಲನಚಿತ್ರದಲ್ಲೂ ಇದೆ.”[೧೨] ಕೇಂದ್ರ ಸರ್ಕಾರವು ರೈತರ ಹೋರಾಟಕ್ಕೆ ಮಣಿದು ೨೦೨೨ರಲ್ಲಿ ಕೃಷಿ ಕಾಯ್ದೆಗಳನ್ನು ಹಿಂದಕ್ಕೆ ಪಡೆದದ್ದನ್ನು ಇಲ್ಲಿ ನೆನೆಯಬೇಕು. ಕ್ಷೇತ್ರಪತಿ ಚಲನಚಿತ್ರದಲ್ಲೂ ಸರ್ಕಾರ ರೈತರ ಹೋರಾಟಕ್ಕೆ ಮಣಿಯುವಲ್ಲಿ ೨೦೨೧ರ ರೈತ ಚಳವಳಿ ನಿರ್ದೇಶಕರಿಗೆ ಪ್ರೇರಣೆ ನೀಡಿರಬಹುದೆಂದು ಊಹಿಸಬಹುದು.

ಎತ್ತಿನಗಾಡಿಗಳ ಮೂಲಕ ನಗರಕ್ಕೆ ಮುತ್ತಿಗೆ ಹಾಕಲು ಪ್ರಯತ್ನಿಸುವ ರೈತರಿಗೆ ಪೊಲೀಸರ ತಡೆಗೋಡೆ, ಬಲಪ್ರಯೋಗ, ಆದಾಯ ತೆರಿಗೆ ಇಲಾಖೆಯ ಮೂಲಕ ನಾಯಕನ ಚಾರಿತ್ರ್ಯ ಹನನ–ಬಂಧನ, ಚಳವಳಿಯನ್ನು ಒಳಗಿನಿಂದಲೇ ದುರ್ಬಲಗೊಳಿಸುವ ಷಡ್ಯಂತ್ರ, ರೈತನ ಕೊಲೆ, ಮಾಧ್ಯಮಗಳ ಭಜನೆ – ಇವೆಲ್ಲ ಘಟನೆಗಳು ಚಲನಚಿತ್ರದ ದೃಶ್ಯಗಳಷ್ಟೇ ಆಗದೆ ವರ್ತಮಾನದ ಘಟನಾವಳಿಗಳಾಗಿಯೂ ಸಹೃದಯರನ್ನು ತಾಕುತ್ತವೆ. ವಾಸ್ತವವಾಗಿಯೂ ರೈತರು ಬೆಂಬಲ ಬೆಲೆಗಾಗಿ ಹೋರಾಟ ಮಾಡುತ್ತಿರುವುದನ್ನು ಕಾಣಬಹುದು. ವಿದ್ಯಾವಂತ ಯುವಕರು ರೈತರಿಗೆ ಸಹಾಯ–ಸಲಹೆಗಳನ್ನು ನೀಡಲು ಚಲನಚಿತ್ರವು ಪ್ರೇರೇಪಿಸುತ್ತದೆ. ರೈತರು ಒಗ್ಗಟ್ಟಾಗಿ ಹೋರಾಡಿದರೆ ತಮ್ಮ ಸಮಸ್ಯೆಗಳಿಗೆ ಪರಿಹಾರ ಪಡೆದುಕೊಳ್ಳಬಹುದೆಂದು ತಿಳಿಸಿರುವುದು ಚಲನಚಿತ್ರದ ಪ್ರಮುಖ ಆಶಯ. ಹೀಗೆ ಚಲನಚಿತ್ರವು ರೈತ ಸಂವೇದನೆಯಿಂದ ಕೂಡಿದ್ದು ರೈತರ ಬದುಕಿನ ನೈಜ ನೋವು–ನಲಿವುಗಳನ್ನು ಮನಮುಟ್ಟುವಂತೆ ನಿರೂಪಿಸಿದೆ.

**ಕೊನೆಟಿಪ್ಪಣಿಗಳು**

[೧] ಕ್ಷೇತ್ರಪತಿ : ಚಲನಚಿತ್ರ, ೨೦೨೩
[೨] ಕ್ಷೇತ್ರಪತಿ : ಚಲನಚಿತ್ರ, ೨೦೨೩
[೩] ಕ್ಷೇತ್ರಪತಿ : ಚಲನಚಿತ್ರ, ೨೦೨೩
[೪] ಕ್ಷೇತ್ರಪತಿ : ಚಲನಚಿತ್ರ, ೨೦೨೩
[೫] ಕ್ಷೇತ್ರಪತಿ : ಚಲನಚಿತ್ರ, ೨೦೨೩
[೬] ಕ್ಷೇತ್ರಪತಿ : ಚಲನಚಿತ್ರ, ೨೦೨೩
[೭] ಕ್ಷೇತ್ರಪತಿ : ಚಲನಚಿತ್ರ, ೨೦೨೩
[೮] ಕ್ಷೇತ್ರಪತಿ : ಚಲನಚಿತ್ರ, ೨೦೨೩
[೯] ಕ್ಷೇತ್ರಪತಿ : ಚಲನಚಿತ್ರ, ೨೦೨೩
[೧೦] ಕ್ಷೇತ್ರಪತಿ : ಚಲನಚಿತ್ರ, ೨೦೨೩
[೧೧] ಕ್ಷೇತ್ರಪತಿ : ಚಲನಚಿತ್ರ, ೨೦೨೩
[೧೨] ರಘುನಾಥ.ಚ.ಹ – ರೈತಪರ ಕ್ಷೇತ್ರಪತಿ : ನಿರ್ಲಕ್ಷ್ಯ ನ್ಯಾಯವೇ(ಲೇಖನ), ಪ್ರಜಾವಾಣಿ ದಿನಪತ್ರಿಕೆ, ೧೧/೩/೨೦೨೪